ದ್ಯಾಮವ್ವನಲ್ಲಿ ಕೇಳುತ್ತಿದ್ದೇನೆ,' ದ್ಯಾಮವ್ವನಲ್ಲಿ ಆಕೆ ನಮ್ರತೆಯಿಂದ ಬೇಡಿಕೊಂಡಳು. ತುಟಿಗಳು ಅಲುಗಾಡಿ ಅವಳ ಪ್ರಾರ್ಥನೆಯನ್ನು ದೇವಿಗೆ ದಾಟಿಸಿದವು. ಮನುಷ್ಯನಲ್ಲಿ ಸೂಕ್ಷ್ಮತೆ ಇಲ್ಲದಿದ್ದರೆ ದೇವರ ಅನುಗ್ರಹ ದೊರಕಲಾರದು. ದೈವದ ಮುಂದೆ ದೊಡ್ಡ ಬಾಯಿ ಮಾಡಬೇಕಾದ ಅಗತ್ಯವಿಲ್ಲವೆಂಬುದು ಅವಳ ನಂಬುಗೆ. 'ದೇವರು ನಮ್ಮನ್ನ ಒಂದು ನಂಬಿಕೆಯ ದಾರಕ್ಕ ಕಟ್ಟಿರ್ತಾನ. ಅದನ್ನ ಹರೀಗೊಡಬಾರದು. ಅಲ್ಲ? ಜಗತ್ತು ಯಾವಾಗಲೂ ವಿಶ್ವಾಸದ ಮೇಲೆ ನಡೆದಿರುತ್ತದೆ. ಚಾಲಕನ ಮೇಲೆ ನೆಚ್ಚಿಗೆಯಿಟ್ಟು ಬಸ್ಸಿನೊಳಗೆ ಕುಳಿತಿರುವುದಿಲ್ಲವೆ? ನೀರು ಜಗ್ಗುವ ಹಗ್ಗದೊಳಗೆ ನಂಬಿಕೆಯ ಎಷ್ಟೊಂದು ನೂಲು ಸೇರಿಕೊಂಡಿವೆ! ಅದು ಹರಿಯುವಷ್ಟು ಜಗ್ಗಬಾರದು ಅಲ್ಲ?' ಮಾಯಕ್ಕ ತನಗೆ ತಾನು ಹೇಳಿಕೊಂಡಳು.

ಮಾಯಕ್ಕನನ್ನು ವಿಶ್ವಾಸದ ಒಂದು ಪ್ರತೀಕವೆಂದೆ ಅನೇಕರು ನಂಬಿದ್ದಾರೆ. ಹಾಗೆಯೆ ಅವಳನ್ನು ಅವಿಶ್ವಾಸ ಹಾಗೂ ಅಪನಂಬಿಕೆಯ ಪ್ರತೀಕವಾಗಿ ನೋಡುವವರೂ ಇದ್ದರು. ಆಕೆ ಮಾಡಿದ ದ್ರೋಹಗಳ ಪಟ್ಟಿ ತನ್ನ ಬಳಿಯಿದೆಯೆಂದು ಸೋಮಣ್ಣ ಉದ್ದ ಹಾಳೆಯೊಂದನ್ನು ಸದಾ ಹಿಡಿದೇ ಕುಳಿತಿರುತ್ತಾನೆ. ಬರಲಿರುವ ಪಂಚಾಯಿತಿ ಚುನಾವಣೆಯಲ್ಲಿ ಈ ಸಲ ಅವಳನ್ನು ಸೋಲಿಸಲೇಬೇಕು. ಅದು ಸೋಮಣ್ಣನ ಕಟ್ಟಕಡೆಯ ಗುರಿಯಾಗಿದೆ. 'ಸೋಮಣ್ಣ, ಬೇಕಾದ್ದು ಒದರಲಿ, ಸಾವಿರ ಸುಳ್ಳು ಹೇಳಲಿ. ಅವನಂತಹ ವಂಚಕನ ಮಾತಿಗೆ ನಾ ಎಂದೂ ಕಿವಿಗೊಡಂಗಿಲ್ಲ,' ತನ್ನ ಕೆಲಸದಲ್ಲಿ ನಿರತಳಾಗಿರುವುದು ಮಾಯಕ್ಕನಿಗೆ ಮೊದಲಿನಿಂದಲೂ ರೂಢಿ.

ಗುಡಿಯ ಸಮೀಪವೆ ಇರುವ ವೃತ್ತಾಕಾರದ ದೊಡ್ಡ ಬಾವಿಯ ನೀರು ಎಷ್ಟೊಂದು ಆಳಕ್ಕೆ ಹೋಗಿದೆ. ದೂರದಲ್ಲೆಲ್ಲೊ ಮಿಣುಕು ಮಿಣುಕು ಕಾಣುವುದು. ಬಗ್ಗಿ ನೋಡಿದರೆ ತಲೆ ತಿರುಗಿದಂತಾಗಿ ಹೆದರಿಕೆಯೆನ್ನುವುದು ಬೆನ್ನುಹುರಿಯಗುಂಟ ಹರಿಯುತ್ತದೆ. ಬ್ರಹ್ಮಾಂಡದ ಈ ತುದಿಯಲ್ಲಿ ನಿಂತು ಪಾತಾಳದಿಂದ ಅತ್ತತ್ತವೆ ಇರುವ ನೀರನ್ನು ಜಗ್ಗಲು ಮೈಲುದ್ದದ ಹಗ್ಗವೇ ಬೇಕೇನೊ! ಈ ಬಾವಿಯಲ್ಲಿ ಕೊಡ ಇಳಿಬಿಟ್ಟು ನೀರು ಎಳೆಯಲು ಎದೆಗಾರಿಕೆ ಬೇಕು. ಈ ಕ್ಷಾಮದಲ್ಲಿ ತಮಗೆ ಗೊತ್ತಿರುವ ಹೊಳೆ, ಹಳ್ಳ, ಕೊಳ್ಳಗಳೆಲ್ಲ ಬತ್ತಿ ಹೊರಟಿವೆ. ಪ್ರಕೃತಿ ಎಷ್ಟೊಂದು ಕೃಶವಾಗಬಲ್ಲುದು! ತಾವು ಹೆಣ್ಣುಮಕ್ಕಳು ಬತ್ತುತ್ತಿರುವ ಬಾವಿಗೆ ಬಂದು ಅಷ್ಟೊಇಷ್ಟೊ ಜೀವಸೆಲೆಯನ್ನು ಮನೆಗೆ ಒಯ್ಯಬೇಕು. ಎಷ್ಟೇ ಕೆಲಸ ಮಾಡಿದರೂ 'ಹೆಂಗಸರು ಮನ್ಯಾಗಿದ್ದು ಏನ್ ಮಾಡ್ತೀರಿ? ನಿಮಗ ಹೊರಗ ದುಡಿದ್ರೆ ಗೊತ್ತಾಗ್ತದ' ಎನ್ನುವ ಬಿರುದೊಂದು ನಿತ್ಯ ಪ್ರದಾನವಾಗುತ್ತಲೆ ಇರುವುದು.

ಮಳೆಯಿಲ್ಲದೆ ಎಷ್ಟೊಂದು ದಿನಗಳು ಸರಿದುಹೋದವು. ಮುಂದಿನ ದಿನಗಳು ಇನ್ನೂ ಕರಾಳ ಇರಬೇಕು. ದೈವ ಕೃಪೆ ತೋರಿ ಮಳೆ ಸುರಿಸಿದರೆ ದೆವ್ವಿನಂತಹ ಈ ಬಾವಿ ನಾಲ್ಕೈದು ಮಳೆಗಳಲ್ಲಿ ತುಂಬಿಕೊಳ್ಳುತ್ತದೆ. ಇಂತಹ ಬಾವಿಗಳೇ ಬಹುಶಃ ತನಗೆ ಧೈರ್ಯ ಕೊಟ್ಟಿರಬೇಕು. ಎಂತೆಂತಹ ವಿಪತ್ತುಗಳನ್ನು ತಾನು ದಾಟಿ ಬಂದೆ! ಹಿಂದೊಮ್ಮೆ ಇದೇ ಬಾವಿಯಲ್ಲಿ ತನ್ನ ಚಿನ್ನದ ಸರ ಬಿದ್ದಿತ್ತು. ಗೆಳತಿಯರು ತನ್ನ ಕೊರಳ ಅಂದ ಬಣ್ಣಿಸುತ್ತಿದ್ದರೋ ಅಥವಾ ತನ್ನ ಸರದ ಅಂದ ಅರುಹುತ್ತಿದ್ದರೋ ಗೊತ್ತಿಲ್ಲ. ಅವರಿವರು ಸರವನ್ನು ಕೈಯಲ್ಲಿ ಹಿಡಿದು, ಮೃದುವಾಗಿ ಸ್ಪರ್ಶಿಸಿ, ಅದನ್ನು ಮೆಲ್ಲನೆ ತಡವುವಾಗ ಅದು ಜಠ್ರನೆ ಜಾರಿ ಈ ದೈತ್ಯ ಬಾವಿಗೆ ಬಿದ್ದಿತ್ತು. ಆ ಆಘಾತ ಉಂಟು ಮಾಡಿದ್ದ ತಲ್ಲಣಗಳನ್ನು ತಾನೆಂದೂ ಮರೆಯಲಾರೆ. ಓಹ್! ಆ ಭೀಕರ ಗಳಿಗೆ ತನ್ನ ಕಣ್ಣಿಂದ ಎಂದಿಗೂ ಮರೆಯಾಗಲಾರದು. ಅದೆಷ್ಟು ಭಯದಲ್ಲಿ ತಾನು ನಡುಗುತ್ತಿದ್ದೆ. ಈ ನಷ್ಟ ತರಲಿರುವ ಭಯಂಕರ ಪರಿಣಾಮಗಳನ್ನು ನೆನೆಸಿಕೊಂಡೇ ಕಂಗಾಲಾಗಿದ್ದೆ. ಅಷ್ಟರಲ್ಲಿ ನಾಗಣ್ಣ ಜೀವರಕ್ಷಕನಾಗಿ ಬಂದ. ನಾಗಣ್ಣ ಆ ಸಮಯಕ್ಕೆ ಒದಗದಿದ್ದರೆ ಏನಾಗುತ್ತಿತ್ತೊ ಗೊತ್ತಿಲ್ಲ. ಅಷ್ಟೊಂದು ಅಮೂಲ್ಯ ಒಡವೆಯನ್ನು ಯಾರಾದರೂ ಹಾಗೆ ಮೂರ್ಖರಂತೆ ಕಳೆದುಕೊಳ್ಳುತ್ತಾರೆಯೆ? ಆ ಬೇಜವಾಬ್ದಾರಿತನ ಏನನ್ನು ಸೂಚಿಸುತ್ತದೆ?

ತನ್ನ ರತ್ನಖಚಿತ ಮಾಲೆ ಅಕಸ್ಮಾತ್ ಸಿಗದೇ ಹೋಗಿದ್ದರೆ ಏನಾಗಬಹುದಾಗಿತ್ತು? ಅದನ್ನು ಊಹಿಸಲೂ ಆಕೆಗೆ ಕಷ್ಟವೆನಿಸಿತು! ಬಹುತೇಕ ವಿಪತ್ತುಗಳಲ್ಲಿ ನೆರವಿಗೆ ನಿಂತವನು ನಾಗಪ್ಪ. ಎಷ್ಟೊಂದು ಮುಗ್ಧ ಹುಡುಗ. ಮಗುವಿನಂತಹ ಮನಸ್ಸು ಅವನದು. ಚುನಾವಣೆ ಸಮಯದಲ್ಲಿಯೂ ತುಂಬ ಓಡಾಡಿದ. ಅವನಿಲ್ಲದಿದ್ದರೆ ಎಲ್ಲರಿಗೂ ತನ್ನ ಪರಿಚಯ ಆಗುತ್ತಿರಲಿಲ್ಲ. ನಾಗಪ್ಪ, ಶಿವಣ್ಣ ಮತ್ತು ಕಾಕಾ ಬೆನ್ನಿಗೆ ನಿಂತರೆಂದೇ ತಾನು ಗೆದ್ದಿರುವುದು ಮತ್ತು ಬದುಕಿರುವುದು. ಅಧ್ಯಕ್ಷ ಸ್ಥಾನ ಮಹಿಳೆಗೆ ಮೀಸಲಾಗಿದ್ದರಿಂದ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಅನಾಯಾಸ ಒಲಿಯಿತು. ಅದಿಲ್ಲದಿದ್ದರೂ ತಾನೆ ಅಧ್ಯಕ್ಷಳಾಗುವುದು ಗ್ಯಾರಂಟಿಯಿತ್ತೆಂದು ದುಂಡಪ್ಪಕಾಕಾ ಹೇಳಿದ.

ದ್ಯಾಮವ್ವನನ್ನು ಆರಾಧಿಸುತ್ತ ತನಗೆ ನೆರವಾದ ಎಲ್ಲರನ್ನೂ ಮಾಯಕ್ಕ ನೆನೆದಳು. ಇವತ್ತು ಚುಮುಚುಮು ಬೆಳಕಿನಲ್ಲಿ ನೀರು ಜಗ್ಗುವಾಗ ದಿನಾಲೂ ಮನೆಗೆ ನೀರು ಹೊತ್ತು ಒಯ್ಯುವ ಹೆಂಗಸರ ಕಷ್ಟ ಮಾಯಕ್ಕನಿಗೆ ಮತ್ತೂ ಮನದಟ್ಟಾಯಿತು. ಈ ಬಾವಿ ನೀರನ್ನು ನಲ್ಲಿಯ ಮೂಲಕ ಊರಿನ ನಾಲ್ಕೈದು ಕಡೆ ಸಿಗುವ ಹಾಗೆ ಯಾಕೆ ಮಾಡಬಾರದು? ಹಿಂದೊಮ್ಮೆ ತಾನು ಪಂಚಾಯಿತಿಯಲ್ಲಿ ಈ ಪ್ರಸ್ತಾಪ ಇಟ್ಟಿದ್ದೆ. ಅದಕ್ಕೆ ಒಂದಿಬ್ಬರು ಗಂಡಸರು ಹಾಗೂ ಒಬ್ಬ ಮಹಿಳಾ ಸದಸ್ಯರು ವಿರೋಧ ಮಾಡಿದರು. ಮನೆ ಮನೆಗೆ ನೀರು ಕೊಟ್ಟರೆ ಹೆಂಗಸರು ಆಲಸಿಗಳಾಗುತ್ತಾರಂತೆ! ಈ ಮಿಕ್ಸರ್ ಗ್ರೈಂಡರ್, ವಾಷಿಂಗ್ ಮಷಿನ್, ರೆಫ್ರಿಜಿರೇಟರ್‌ಗಳು ಹೆಂಗಸರನ್ನು ಹಾಳು ಮಾಡಿವೆಯೆಂಬುದು ಅವರ ಆಪಾದನೆಯಾಗಿತ್ತು. ತಾನು ಅದಕ್ಕೆ ತುಂಬ ಖಾರವಾದ ಉತ್ತರ ಕೊಟ್ಟು ಅವರನ್ನು ಸುಮ್ಮನಾಗಿಸಿದ್ದೆ: 'ನೀರು ತರುವುದು, ಬಟ್ಟೆ ಒಗೆಯುವುದು, ಕಸ ಹೊಡೆಯುವುದು, ಕುಟ್ಟುವುದು, ಬೀಸುವುದು, ರುಬ್ಬುವುದು ಗಂಡಸರು ನೀವು ಮಾಡಿ ತೋರಿಸಿರಿ. ಸರಳವೋ, ಕಷ್ಟವೋ ಎಂದು ತಿಳಿಯುತ್ತದೆ,' ಅವರು ಸುಮ್ಮನಾದರು.

ಸರಕಾರದಿಂದ ದುಡ್ಡು ಬಿಡುಗಡೆಯಾದ ಕೂಡಲೆ ದೊಡ್ಡ ನೀರಿನ ಟ್ಯಾಂಕ್ ಕಟ್ಟಿಸಿ, ಬಾವಿಯ ನೀರನ್ನು ಅಲ್ಲಿಗೆ ಸರಬರಾಜು ಮಾಡುವುದಿದೆ. ಸರಕಾರದ ಅನುಮೋದನೆಯೂ ಸಿಕ್ಕಿದೆ. ಈ ಪುರಾತನ ಬಾವಿಯನ್ನು ಜಖಂಗೊಳ್ಳದಂತೆ ಕಾಪಾಡುವುದು ಸಹ ಮುಖ್ಯ. ನೀರಿನ ಹೊಸ ಮೂಲಗಳನ್ನು ಹುಡುಕಿಕೊಳ್ಳದಿದ್ದರೆ ಮುಂದಿನ ದಿನಗಳು ಕಠಿಣವಾಗಿರಲಿವೆಯೆಂದು ಪರಿಣತರು ಹೇಳಿಹೋಗಿದ್ದಾರೆ. ಈ ಬಾವಿ ಇಲ್ಲದಿದ್ದರೆ ತಾವೆಲ್ಲ ಗುಳೆ ಹೋಗಬೇಕಾಗಿತ್ತು. ನೀರಿನ ಮೂಲವಾಗಿರುವ ಊರ ಬಾವಿಯ ನಿರ್ಮಾಪಕರನ್ನು ಮತ್ತೆ ಮತ್ತೆ ನೆನೆದಳು ಮಾಯಕ್ಕ. ಎಷ್ಟೊಂದು ಕರಾರುವಾಕ್ಕಾಗಿ ಅವರು ಬಾವಿಯನ್ನು ಕೊರೆದಿದ್ದಾರೆ. ಅದಕ್ಕೆ ಎಷ್ಟೆಲ್ಲ ಜಲಮೂಲಗಳು. ನೀರು ಕೂಡ ಎಷ್ಟೊಂದು ಸಿಹಿ. ಇದು ಸುಮಾರು ಮುನ್ನೂರು ವರ್ಷಗಳ ಹಿಂದಿನದು ಎನ್ನುತ್ತಾರೆ.

ಮೇಲ್ಭಾಗದಲ್ಲಿ ಹಾಗೂ ಅಲ್ಲಲ್ಲಿ ಒಳಗಡೆ ಸಿಮೆಂಟ್‌ನಿಂದ ರಿಪೇರಿ ಮಾಡಿಸಿದ್ದನ್ನು ಬಿಟ್ಟರೆ ಬೇರೆ ಕಾಮಗಾರಿ ಮಾಡಿಸಿಲ್ಲ. ಎಲ್ಲ ಬಾವಿಗಳು ಬತ್ತಿದರೂ ಈ ಬಾವಿ ಮಾತ್ರ ಬತ್ತುವುದಿಲ್ಲ. ನವಲಗುಂದ ನಾಗಲಿಂಗಸ್ವಾಮಿಗಳು, ಗರಗದ ಮಡಿವಾಳೇಶ್ವರರು, ಹುಬ್ಬಳ್ಳಿ ಸಿದ್ಧಾರೂಢರು, ಶಿಶುನಾಳ ಶರೀಫರು ಈ ಬಾವಿಯ ನೀರು ಕುಡಿದು ಹೋಗಿದ್ದಾರೆಂದು ಹಿರಿಯರು ಹೇಳುತ್ತಾರೆ. ಒಮ್ಮೆ ಈ ದಾರಿಯಲ್ಲಿ ಅವರೆಲ್ಲ ನಡೆದುಹೋಗುತ್ತಿರುವಾಗ ಅತೀವ ತೃಷೆಯಾಗಿ ಈ ಬಾವಿಗೆ ಬಂದರು. ಕುಡಿಯಲು ನೀರು ಕೇಳಿದರು. 'ಇವರ್ಯಾರೊ ಅಪರಿಚಿತರು, ಯಾವ ಊರೋ, ಯಾವ ಜಾತಿಕುಲವೋ?' ಅಲ್ಲಿದ್ದ ಹೆಂಗಸರು ನೀರು ಕೊಡಲು ಹಿಂಜರಿದರು. ಆಗ ಸಂತರು ನೀರು ಒಯ್ಯಲು ದೂರದಲ್ಲಿ ಕುಳಿತಿದ್ದ ಒಬ್ಬ ದಲಿತ ಹೆಣ್ಣುಮಗಳತ್ತ ನಡೆದುಹೋದರು. ಹಿರಿಯ ಸ್ವಾಮಿಗಳೆಲ್ಲ ತನ್ನೆಡೆಗೆ ಬರುತ್ತಿರುವುದಕ್ಕೆ ಆ ಬಾಲಕಿಗೆ ಭಯವೂ ಸಂತೋಷವೂ ಒಟ್ಟಿಗೆ ಆದವು.

'ಅವ್ವಾ, ನೀನಾದರೂ ತುಸು ನೀರು ಹಣಿಸು' ಸಂತರು ವಿನಂತಿಸಿದರು. ಇಷ್ಟು ದೊಡ್ಡವರು ತನಗೇಕೆ ವಿನಂತಿಸಬೇಕು? ಪುಟ್ಟ ಹೃದಯ ತುಂಬಿ ಬಂತು. ತಾನು ಹಿಡಿದುಕೊಂಡಿದ್ದ ಮಣ್ಣಿನ ಖಾಲಿ ಬೋಗುಣಿ ತೋರಿಸಿದಳು. 'ಅಪ್ಪಾರ, ನಾನೂ ಇವರ ಕಡೆ ನೀರು ಬೇಡಲಿಕ್ಕೆ ನಿಂತೇನಿ. ಅವರು ಹಣಿಸಿದಾಗ ನನ್ನ ಮನೆಗೆ ಒಯ್ತೇನಿ. ನನ್ನ ಕಡೆ ಕೊಡ ಇಲ್ಲ, ಹಗ್ಗ ಇಲ್ಲ. ಸಣ್ಣ ಹುಡುಗಿ ಎಂದು ಬೆದರಿಸ್ತಾರ. ಅವರ ಹತ್ತಿರ ಹೋಗಬಾರದಂತೆ. ಅವರು ತುಂಬಿದ ಮೇಲೆ ನಾವು ತುಂಬಬೇಕು. ಅದಕ್ಕಂತನ ಅವರ ಕಡೆಯಿಂದಲೆ ಇಸಕೊಂಡ ಬಾ ಅಂತ ಮನಿಯೊಳ ಕಳಿಸ್ತಾರ.'

'ಅಲ್ಲಮ್ಮ ಬಾಲಕಿ, ಅವರ ಸಲುವಾಗಿ ನೀನ್ಯಾಕ